# ಶೋಭಾಯಮಾನ

ವೃತ್ತಿಜೀವನದ ಬೆಳ್ಳಿಹಬ್ಬದ ಹೊಸ್ತಿಲಲ್ಲಿರುವ ಶೋಭರಾಜ್ ವಿಭಿನ್ನ ಪಾತ್ರಗಳ ಮೂಲಕ ಕನ್ನಡದ ಖಳನಟರ ಪರಂಪರೆಯನ್ನು ಮುಂದುವರಿಸಿರುವ ವಿಶಿಷ್ಟ ಕಲಾವಿದ. 24 ವರ್ಷಗಳ ವೃತ್ತಿಜೀವನದಲ್ಲಿ ಸುಮಾರು 300 ಸಿನಿಮಾಗಳಲ್ಲಿ ನಟಿಸಿರುವುದು ಅವರ ಪ್ರತಿಭೆಯನ್ನೂ ಜನಪ್ರಿಯತೆಯನ್ನೂ ಸೂಚಿಸುವಂತೆ.



‘ಚೈತ್ರದ ಪ್ರೇಮಾಂಜಲಿ’ ಶೋಭರಾಜ್ ನಟನೆಯ ಚೊಚ್ಚಿಲ ಚಿತ್ರ. ಕಲಾವಿದನಾಗಿ ಚೈತ್ರದ ಬಿಸುಪನ್ನು ನಿರಂತರವಾಗಿ ಉಳಿಸಿಕೊಂಡಿರುವುದು ಅವರ ಅಗ್ಗಳಿಕೆ. ‘ಈಗ ಕುಳಿತು ಕಥೆ ಮಾಡುವ ಪುರುಸೊತ್ತು ಯಾರಿಗಿದೆ? ಇಂಥ ಸಂದರ್ಭದಲ್ಲಿ ಗಟ್ಟಿಯಾದ ಪಾತ್ರಗಳನ್ನು ನಿರೀಕ್ಷಿಸುವುದಾದರೂ ಹೇಗೆ?’ ಎಂದು ಒಂದೇ ಮಾತಿನಲ್ಲಿ ಕನ್ನಡ ಚಿತ್ರರಂಗದ ಇಂದಿನ ಬೌದ್ಧಿಕ ದಿವಾಳಿತನವನ್ನು ಶೋಭರಾಜ್ ಸೂಚಿಸುತ್ತಾರೆ.

‘ಮೊದಲು ಸ್ವಂತ ಕಥೆಯ ಸಿನಿಮಾಗಳು ರೂಪುಗೊಳ್ಳುತ್ತಿದ್ದವು. ಅಂಥ ಸಿನಿಮಾಗಳಲ್ಲಿನ ಖಳಪಾತ್ರಗಳಲ್ಲೂ ಹೊಸತನ ಇರುತ್ತಿತ್ತು. ಈಗ ರೀಮೇಕ್ ಸಿನಿಮಾಗಳ ಕಾಲ. ಮೂಲ ಚಿತ್ರದಲ್ಲಿ ಖಳನಟ ತೊಟ್ಟಿರುವಂತಹ ಅಂಗಿಯನ್ನೇ ಇಲ್ಲೂ ತೊಡಿಸುತ್ತಾರೆ. ಅಲ್ಲಿನ ವಿಲನ್ ಎಡಗೈಯಲ್ಲಿ ಸಿಗರೇಟ್ ಸೇದಿದ್ದರೆ ನಮ್ಮನ್ನೂ ಎಡಚರನನ್ನಾಗಿಸುತ್ತಾರೆ. ಇಂಥ ಸಂದರ್ಭದಲ್ಲಿ ಹೊಸತನ–ಸ್ವಂತಿಕೆ ಸಾಧ್ಯವಾಗುವುದಿಲ್ಲ’ ಎನ್ನುವುದು ಶೋಭರಾಜ್ ಅನಿಸಿಕೆ.

ಪರಭಾಷೆಯಿಂದ ಕಲಾವಿದರನ್ನು ಕರೆತರುವ ಬಗ್ಗೆ ಶೋಭರಾಜ್ ಅವರಿಗೆ ಆತಂಕವೇನೂ ಇಲ್ಲ. ‘ಇಂಥ ಆಮದು ನಟರ ಬಾಳಿಕೆ ತೀರಾ ಕಡಿಮೆ. ಅವರ ಡಿಮ್ಯಾಂಡ್‌ಗಳನ್ನು ಪೂರೈಸುವುದೂ ನಮಗೆ ಕಷ್ಟ. ಹಾಗಾಗಿ ದೀರ್ಘಾವಧಿಯಲ್ಲಿ ಉಳಿಯುವುದು ನಾವೇ’ ಎನ್ನುವ ನಂಬಿಕೆ ಅವರದು.

ಬೇಡಿಕೆ ಇರುತ್ತದೆ ಅಷ್ಟೇ’ ಎಂದು ಮಾರುಕಟ್ಟೆಯ ಲೆಕ್ಕಾಚಾರದತ್ತ ಬೆಟ್ಟುಮಾಡುತ್ತಾರೆ.

ಅಂದಹಾಗೆ, ‘ಯುದ್ಧಕಾಂಡ’, ‘ಡಾನ್ಸ್ ರಾಜ ಡಾನ್ಸ್’ ಚಿತ್ರಗಳಲ್ಲಿ ದೇವರಾಜ್ ನಿರ್ವಹಿಸಿದ ಖಳಪಾತ್ರಗಳನ್ನು ಚಿತ್ರರಸಿಕರು ಮರೆಯಲು ಸಾಧ್ಯವೇ? ಇದೇ ದೇವರಾಜ್, ‘ತರ್ಕ’, ‘ಉತ್ಕರ್ಷ’ ಚಿತ್ರಗಳಲ್ಲಿ ನೇತ್ಯಾತ್ಮಕ ಪಾತ್ರಗಳಿಗೆ ಜೀವತುಂಬಿದ್ದನ್ನು ಮರೆಯಲಾದೀತೆ? ಇಂಥ ಪಾತ್ರಗಳ ಸವಾಲು ಇಂದಿನ ಕಲಾವಿದರಿಗೂ ದೊರೆಯುತ್ತಿವೆಯೇ ಎನ್ನುವುದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ಈ ಪ್ರಶ್ನೆಗೆ ಉತ್ತರರೂಪದಲ್ಲಿ ‘ಕಾಲ ಬದಲಾಗಿದೆ’ ಎನ್ನುವ ದೇವರಾಜ್‌ರ ಉದ್ಗಾರವನ್ನೇ ಉದ್ಗರಿಸುತ್ತ ಮುಂದೆ ಹೋಗಬಹುದು.

## ನಾಯಕರ ಹಸ್ತಕ್ಷೇಪ

ಖಳ ಪಾತ್ರಗಳೂ ಸೇರಿದಂತೆ ಒಳ್ಳೆಯ ಪಾತ್ರಗಳು ರೂಪುಗೊಳ್ಳದಿರುವುದಕ್ಕೆ ಒಂದು ಕಾರಣದ ರೂಪದಲ್ಲಿ ನಾಯಕನಟರನ್ನು ಗುರ್ತಿಸುವವರೂ ಇದ್ದಾರೆ. ‘ನಾಯಕರು ಇಲ್ಲಿ ಎಲ್ಲವನ್ನೂ ನಿರ್ಧರಿಸುತ್ತಾರೆ. ಬೇರೆ ಬೇರೆ ಕಾರಣಗಳಿಂದಾಗಿ ಅವರು ಅಸುರಕ್ಷತೆ ಎದುರಿಸುತ್ತಾರೆ. ಈ ಇನ್‌ಸೆಕ್ಯೂರಿಟಿಯೇ ಒಳ್ಳೆಯ ಪಾತ್ರಗಳು ರೂಪುಗೊಳ್ಳದಂತೆ ತಡೆಯುತ್ತದೆ. ನಿರ್ದೇಶಕರು ಕೂಡ ನಾಯಕರ



ಕೇಡಿ ನಂ.1
ರವಿಶಂಕರ್

ಇಮೇಜನ್ನು ಪೋಷಿಸಲು ಹೆಚ್ಚು ಆಸ್ಥೆ ವಹಿಸುವುದರಿಂದ ಇತರೆ ಪಾತ್ರಗಳು ಸೊರಗುತ್ತವೆ’ ಎನ್ನುವುದು ಕಿಶೋರ್ ಅವರ ಅನಿಸಿಕೆ.

‘ವೀರಪ್ಪನ್’ನಂಥ ವಿಶಿಷ್ಟ ಖಳಪಾತ್ರವನ್ನು ಪೋಷಿಸಿದ ಗಡಸುಕಂಠ, ಚೂಪುನೋಟದ ಕಿಶೋರ್ ಕನ್ನಡ ಚಿತ್ರರಂಗದ ಪ್ರತಿಭಾವಂತ ಕಲಾವಿದರಲ್ಲೊಬ್ಬರು. ಖಳಪಾತ್ರಗಳ ಜೊತೆಗೆ ನಾಯಕಪಾತ್ರಗಳಲ್ಲೂ ನಟಿಸುತ್ತ ಕಲಾವಿದನಾಗಿ ತಮ್ಮನ್ನು ತಾವು ಪ್ರಯೋಗಗಳಿಗೆ ಒಡ್ಡಿಕೊಂಡವರು. ‘ಯಾರ್ ರಾ ಅಂದಾ ಕಬಾಲಿ...’ ಎನ್ನುವ ರಜನಿಕಾಂತ್‌ರ ‘ಕಬಾಲಿ’ ಚಿತ್ರದಲ್ಲಿನ ಕಿಶೋರ್ ಅವರ ಡೈಲಾಗ್ ಚಿತ್ರರಸಿಕರನ್ನು ಮರುಳುಮಾಡಿತ್ತು. ದಪ್ಪನೆ ಉಂಗುರ, ಸೈಕಲ್ ಚೈನಿನಂಥ ಬಂಗಾರದ ಚೈನು ಹಾಗೂ ಕಡಗ ಹಾಕಿಕೊಂಡ ಮಲೇಷ್ಯಾದಲ್ಲಿನ ಡಾನ್ ಪಾತ್ರದಲ್ಲಿ ಕಿಶೋರ್ ಗಮನ ಸೆಳೆದಿದ್ದರು. ‘ಕಬಾಲಿ’ ಮೂಲಕ ತಮ್ಮ ವೃತ್ತಿಜೀವನದ ಹೊಸ ಮಜಲನ್ನು ತಲುಪಿದ ಕಿಶೋರ್, ಕನ್ನಡದ ಜೊತೆಗೆ ತಮಿಳಿನಲ್ಲೂ ಚಾಲ್ತಿಯಲ್ಲಿರುವ ಕಲಾವಿದ.



‘ಭೂ ಕೈಲಾಸ’ದಲ್ಲಿ ರಾವಣನಾಗಿ ಸುಬ್ಬಯ್ಯ ನಾಯ್ಡು

ಇಂಥ ಕಲಾವಿದನನ್ನು ‘ಈಗಿನ ಖಳಪಾತ್ರಗಳ ಬಗ್ಗೆ ಹೇಳಿ’ ಎಂದರೆ, ಅವರು ತೆರೆಯಾಚೆಗಿನ ಪಾತ್ರಗಳ ಬಗ್ಗೆಯೇ ಹೆಚ್ಚು ಮಾತನಾಡುತ್ತಾರೆ. ಅವರ ಮಾತುಗಳ ಧ್ವನಿ ಹಿಡಿದು ಹೇಳುವುದಾದರೆ – ನಿಜವಾದ ಖಳರು ತೆರೆಯಾಚೆಗೇ ಇರುವಂತಿದೆ. ಹಂಚಿಕೆದಾರರು, ಪ್ರದರ್ಶಕರು, ನಿರ್ಮಾಪಕರು, ಹೀರೊಗಳು – ಸ್ವಾರ್ಥ ಎಲ್ಲಿಲ್ಲ ಹೇಳಿ? ಒಳ್ಳೆಯ ಚಿತ್ರಗಳನ್ನು ಸೋಲಿಸುವ ಪ್ರೇಕ್ಷಕನಲ್ಲಿ ಕೂಡ ಖಳನ ಛಾಯೆಗಳಿಲ್ಲವೇ? ಕಲೆಗಿಂತಲೂ ವ್ಯಾಪಾರದ ಬಟ್ಟಲಿನ ತೂಕವೇ ಹೆಚ್ಚಾದಾಗ ಉಂಟಾಗುವ ವಿಪರ್ಯಾಸ ಇದು.

ನಾಯಕಿಯರು ಉದಾರವಾದಕ್ಕೆ ಒಗ್ಗಿಕೊಂಡ ಮೇಲೆ ಕ್ಯಾಬರೆ ನರ್ತಕಿಯರು ಕಡಿಮೆಯಾದಂತೆ, ನಾಯಕರು ಖಳಪಾತ್ರಗಳಲ್ಲಿ ಕಾಣಿಸಿಕೊಳ್ಳುವ ವೈರುಧ್ಯವನ್ನೂ ಇಲ್ಲಿ ಗುರ್ತಿಸಬೇಕು. ವಿಭಿನ್ನ ಪಾತ್ರಗಳ ಹಂಬಲದಿಂದ ಖಳಛಾಯೆಯ ಪಾತ್ರಗಳಲ್ಲಿ ನಟಿಸುವುದು ಬೇರೆಯ ಮಾತು. ಆದರೆ, ಇವತ್ತಿನ ಹೀರೊಗಳು ವಿಭಿನ್ನ ಪಾತ್ರಗಳ



ನೀನಾಸಂ ಅಶ್ವಥ್

